ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ
ಎನ್ ಹೆಚ್ – 206, ಸಾಗರ ರಸ್ತೆ, ಶಿವಮೊಗ್ಗ – 577 204
PES IAMS
PES INSTITUTE OF ADVANCED MANAGEMENT STUDIES
Affliated to Kuvempu University, Recognized by Govt. of Karnataka
NH – 206, Sagar Road, Shivamogga – 577 204
Ph. : 8147053085 / 8147053084 / 8217377219
Email: principalpesiams@pestrust.edu.in
pesiams@pestrust.edu.in
Website: http://pestrust.edu.in/pesiams
AISHE Code: C – 17806

ದಿನಾಂಕ: 01–12–2022

ಪ್ರಕಟಣೆಯ ಕೃಪೆಗಾಗಿ

## ವಿದ್ಯಾರ್ಥಿಗಳು ಕನ್ನಡ ಭಾಷೆ – ಸಂಸ್ಕೃತಿಯನ್ನು ಕಟ್ಟಲು ಕಂಕಣಬದ್ಧರಾಗಬೇಕು

–ಶ್ರೀ ಎಂ ಎನ್ ಸುಂದರರಾಜ್

ಕನ್ನಡ ಭಾಷೆಗೆ 2500 ವರ್ಷಗಳ ಸುದೀರ್ಘವಾದ ಇತಿಹಾಸವಿದೆ. ಅಶೋಕನ ಶಾಸನದಲ್ಲಿ ಮೊದಲಿಗೆ ಕನ್ನಡದ ಪದಗಳು ಕಾಣ ಸಿಗುತ್ತವೆ. ಅಂದಿನಿಂದ ಇಲ್ಲಿಯವರೆಗೆ ಭಾಷೆ ಮತ್ತು ಸಾಹಿತ್ಯದಲ್ಲಿ ಹಲವಾರು ಪ್ರಯೋಗಗಳು ನಡೆದಿವೆ. ಭಾಷೆಯನ್ನು ಮತ್ತು ಸಾಹಿತ್ಯವನ್ನು ಬಳಸಿದಷ್ಟು ಅವು ಶ್ರೀಮಂತವಾಗುತ್ತದೆ ಅಲ್ಲದೆ ನಾವೂ ಕೂಡ ಬೆಳೆಯುತ್ತೇವೆ. ಮೆಸಪಟೋಮಿಯ ಮತ್ತು ಸುಮೇರಿಯನ್ ನಾಗರೀಕತೆಯಲ್ಲಿನ ಹಲವು ಭಾಷೆಗಳು ನಶಿಸಿ ಹೋಗಿವೆ. ಅಂಕಿ ಅಂಶಗಳ ಪ್ರಕಾರ ನೂರಾರು ಭಾಷೆಗಳಿರುವ ಭಾರತದಲ್ಲಿ ಭಾಷೆಯನ್ನು ಬಳಸುವವರ ಸಂಖ್ಯೆಯನ್ನು ಗಮನಿಸಿದರೆ ಹಿಂದಿ ಭಾಷೆ ಮಾತನಾಡುವವರ ಸಂಖ್ಯೆ ಶೇ 50% ಏರಿಕೆಯಾಗಿದೆ, ತೆಲಗು ಮಾತನಾಡುವವರ ಸಂಖ್ಯೆ ಶೇ 7% ಹೆಚ್ಚಾಗಿದೆ ಆದರೆ ಕನ್ನಡ ಮಾತನಾಡುವವರ ಸಂಖ್ಯೆ ಕೇವಲ 3.5% ಏರಿಕೆಯಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಕೂಡ ನಮ್ಮ ಕನ್ನಡ ಭಾಷೆ ಸಂಸ್ಕೃತಿ, ಪರಂಪರೆಗಳ ಉಳಿವಿಗಾಗಿ ಕಂಕಣಬದ್ಧರಾಗಬೇಕು. ಕನ್ನಡ ಸಂಸ್ಕೃತಿ ಮತ್ತು ಕಲೆಗಳನ್ನು ಉಳಿಸುವಲ್ಲಿ ತಮ್ಮ ಕೊಡುಗೆಗಳನ್ನು ನೀಡಬೇಕು. ನಿಮ್ಮೆಲ್ಲರಲ್ಲಿಯೂ ಪ್ರತಿಭೆ ಮತ್ತು ಶಕ್ತಿ ಇದೆ. ನೀವೆಲ್ಲರೂ ಕೂಡ ಹೆಚ್ಚೆಚ್ಚು ಪುಸ್ತಕಗಳನ್ನು ಓದುವುದರ ಮೂಲಕ ಬರವಣಿಗೆ ಮಾಡಲು ಕೂಡ ಯತ್ನಿಸಬೇಕು ಎಂದರು. ಹಾಗೆಯೇ ಡಾ. ಎನ್ ಪ್ರವೀಣ್ ಚಂದ್ರ ಅವರ ಕೃತಿ ಸ್ಫೂರ್ತಿಯ ಚಿಲುಮೆಗಳು ಎಂಬ ಕೃತಿಯನ್ನು ಪರಿಚಯಿಸುತ್ತಾ ಈ ಕೃತಿ ಅತ್ಯಂತ ಮೌಲಿಕವಾಗಿದೆ ಪ್ರತಿಯೊಬ್ಬರೂ ಕೂಡ ಇದನ್ನು ಕೊಂಡು ಓದಬೇಕು. 31 ಜನ ಸಾಧಕರು ತಮ್ಮ ಬದುಕಿನಲ್ಲಿ ಸಾಕಷ್ಟು ಪರಿಶ್ರಮಪಟ್ಟು ಅಪೂರ್ವ ಸಾಧನೆಯನ್ನು ಮಾಡಿದ್ದಾರೆ. ಅನಾಥರ ಸಿಂಧುತಾಯಿ ಸಪ್ಕಾಲ್, ಮೆಡಿಸಿನ್ ಬಾಬಾ ಓಂಕಾರನಾಥ ಶರ್ಮ, ಬ್ರಿಡ್ಜ್ ಮ್ಯಾನ್ ಗಿರೀಶ್ ಭಾರದ್ವಾಜ್, ಅಕ್ಷರ ಸಂತ ಹರೇಕಳ ಹಾಜಬ್ಬರಂತಹ ವಿವಿಧ ಕ್ಷೇತ್ರಗಳಲ್ಲಿ ಅಪರೂಪದ ಸಾಧನೆ ಮಾಡಿದ ಸಾಧಕರ ಕಥೆಗಳು ಇಲ್ಲಿ ಅಂಕಣ ಬರಹದ ರೂಪದಲ್ಲಿ ಪ್ರಕಟಗೊಂಡು ಸುಂದರವಾಗಿ ಕೃತಿಯಾಗಿ ಮೂಡಿ ಬಂದಿವೆ ಈ ಕೃತಿಯನ್ನು ಓದುವುದರ ಮೂಲಕ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಎಂ ಎನ್ ಸುಂದರರಾಜ್ ಅವರು ಪಿಇಎಸ್ ಐಎಎಮ್ ಎಸ್ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ನುಡಿ ಹಬ್ಬ ಮತ್ತು ಪುಸ್ತಕಪರಿಚಯ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಸಭೆಯನ್ನು ಉದ್ದೇಶಿಸಿ ನುಡಿದರು.

ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ
ಎನ್ ಹೆಚ್ – 206, ಸಾಗರ ರಸ್ತೆ, ಶಿವಮೊಗ್ಗ – 577 204
PES IAMS
PES INSTITUTE OF ADVANCED MANAGEMENT STUDIES
Affiliated to Kuvempu University, Recognized by Govt. of Karnataka
NH – 206, Sagar Road, Shivamogga – 577 204
Ph.: 8147053085 / 8147053084 / 8217377219
Email: principalpesiams@pestrust.edu.in
pesiams@pestrust.edu.in
Website: http://pestrust.edu.in/pesiams
AISHE Code: C – 17806
NAAC A

ಕನ್ನಡ ನುಡಿ ಹಬ್ಬದ ಸಂಚಾಲಕರಾದ ಡಾ. ಎನ್ ಪ್ರವೀಣ್ ಚಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನು ಆಡುತ್ತಾ ಈ ಕೃತಿಯು ಕಳೆದ 8 ವರ್ಷದ ಅವಧಿಯಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ವಿಶಿಷ್ಟ ಸಾಧಕರ ಯಶೋಗಾಥೆಗಳನ್ನು ಹೊಂದಿದೆ. ಇದನ್ನು ಓದುವುದರಿಂದ ನಿಮ್ಮಲ್ಲಿ ಧೈರ್ಯ, ಆತ್ಮವಿಶ್ವಾಸ, ಸಂಕಲ್ಪ ಶಕ್ತಿ ಮೂಡಲಿದೆ, ಸಾಧನೆಯನ್ನು ಮಾಡಲು ಇದು ನಿಮ್ಮನ್ನು ಪ್ರೇರೇಪಿಸಲಿದೆ. ಸೋಲು, ನಿರಾಶೆ, ದು:ಖದ ಭಾವವಗಳಿಂದ ನಿಮ್ಮನ್ನು ಮೇಲಕ್ಕೆತ್ತಲಿದೆ. ಎಲ್ಲರೂ ಈ ಕೃತಿಯನ್ನು ಓದುವುದರಿಂದ ನಿಜಕ್ಕೂ ಸ್ಫೂರ್ತಿಯನ್ನು ಪಡೆಯಲಿದ್ದೀರಿ. ಆದರ್ಶ ಶಿಕ್ಷಕರು, ರಕ್ತದಾನಿಗಳು, ಸಮಾಜ ಸೇವಕರು, ಹೃದಯವಂತ ಉದ್ಯಮಿಗಳು, ಸಾಹಿತಿಗಳು ಈ ಕೃತಿಯ ಅಂಕಣಬರಹಗಳಲ್ಲಿ ಅನಾವರಣಗೊಂಡಿದ್ದಾರೆ. ಅಲ್ಲದೆ ನೀವೆಲ್ಲರೂ ಪುಸ್ತಕವನ್ನು ಓದುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಿ ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಅರುಣಾ. ಎ ಅವರು ಮಾತನಾಡುತ್ತಾ ಸಾಹಿತ್ಯವನ್ನು ಓದುವುದರಿಂದ ಬದುಕನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಎಲ್ಲರೂ ಮೊಬೈಲ್, ಟಿವಿ, ಕಂಪ್ಯೂಟರ್ ಇತ್ಯಾದಿಗಳಿಗೆ ಮಾರುಹೋಗುತ್ತಿದ್ದಾರೆ. ಇದರಿಂದ ಆಗುವ ಅನುಕೂಲಕ್ಕಿಂತ ದುಷ್ಪರಿಣಾಮಗಳೇ ಹೆಚ್ಚಿವೆ. ಅದರ ಬದಲಾಗಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದರಿಂದ ಬದುಕನ್ನು ನೋಡುವ ಕ್ರಮ ಬದಲಾಗಬಹುದು. ಅಲ್ಲದೆ ನಿಮ್ಮ ವ್ಯಕ್ತಿತ್ವ ವಿಕಸನವಾಗುತ್ತದೆ. ಮಹಾನ್ ಸಾಧಕರ ಸಾಧನೆಯ ಹೆಜ್ಜೆಗಳನ್ನು ಗಮನಿಸಿದಾದ ಅವರ ಪರಿಶ್ರಮದ ಬದುಕು ನಿಮಗೆ ತಿಳಿಯುತ್ತದೆ. ಸಾಧನೆಗೆ ಪ್ರೇರಣೆ ಸಿಗುತ್ತದೆ. ಪುಸ್ತಕಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಿ ಆ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಿ ಅದರ ಜೊತೆಗೆ ನಿಮ್ಮ ಜ್ಞಾನವನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಿ ಎಂದು ಕಿವಿಮಾತನ್ನು ಹೇಳಿದರು. ವೇದಿಕೆಯಲ್ಲಿ ಅಭಿವ್ಯಕ್ತಿ ವೇದಿಕೆಯ ಸಂಚಾಲಕರಾದ ವಿದ್ಯಾ ಎಸ್ ಹಾಗೂ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಅನಿತ ಸಿ ಬಿ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಎಂಕಾಂ ವಿಭಾಗದ ಸಂಚಾಲಕರಾದ ಡಾ. ದಿಲೀಪ್ ಕುಮಾರ್ ಎಸ್. ಡಿ. ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಕೃಷ್ಣ ಎಂ ಎಂ ಹಾಗೂ ಹಲವು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಕನ್ನಡ ಗೀತೆಗಳನ್ನು ಪ್ರಸ್ತುತಪಡಿಸಿದರು. ಹೇಮಂತ್ ಉಡುಪ ಸ್ವಾಗತಿಸಿ, ಕು. ಸಂಜನ ವಂದಿಸಿ, ಅಭಿಷೇಕ್ ಜೆ ಅವರು ನಿರೂಪಿಸಿದರು.

Vidya S S

**CO ORDINATOR**

1/12/22

**PRINCIPAL**

Principal
PES Institute of Advanced Management Studies
NH 206, Sagar Road
SHIVAMOGGA-577 204.